ದಿನಾಂಕ 20.09.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ದಿನಾಂಕ 16.06.2014 ರ ಕ್ರಯದ ಕರಾರು ಪತ್ರವನ್ನು ನಿಪಿ-9, ಸದರಿ ದಾಖಲೆಯಲ್ಲಿ ತನ್ನ ಸಹಿ ಎಂದು ಸಾಕ್ಷಿಯು ಪುಟ ಸಂಖ್ಯೆ 3 ರಲ್ಲಿ ಗುರುತಿಸಿದ ಸಹಿಯನ್ನು ನಿಪಿ-9(ಎ), ಸದರಿ ದಾಖಲೆಯ ಪ್ರತೀ ಪುಟದಲ್ಲಿಯೂ ಪ್ರತಿವಾದಿಯ ಸಹಿ ಎಂದು ಸಾಕ್ಷಿಯು ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯಲ್ಲಿನ ಪುಟ ಸಂಖ್ಯೆ 3 ರಲ್ಲಿ ಕ್ರಯಕ್ಕೆ ಕೊಟ್ಟವರು ಎಂಬ ಕಾಲಂನಲ್ಲಿರುವ ಪ್ರತಿವಾದಿಯ ಸಹಿ ಎಂದು ಗುರುತಿಸಿದ ಸಹಿಯನ್ನು ನಿಪಿ-9(ಬಿ), ಸದರಿ ದಾಖಲೆಯಲ್ಲಿ ಸಾಕ್ಷಿದಾರರ ಸಹಿಗಳೆಂದು ಗುರುತಿಸಿದ ಮೂರು ಸಹಿಗಳನ್ನು ಕ್ರಮವಾಗಿ ನಿಪಿ-9(ಸಿ) ಯಿಂದ ನಿಪಿ-9(ಇ), ಸಾಕ್ಷಿಯು ಸದರಿ ದಾಖಲೆಯ ಪ್ರತೀ ಪುಟಕ್ಕೂ ಪ್ರತಿವಾದಿಯ ಗಂಡ ಸಂಪಂಗಯ್ಯರವರು ತಮ್ಮ ಹೆಬ್ಬೆಟ್ಟಿನ ಗುರುತುಗಳನ್ನು ಹಾಕಿರುವುದಾಗಿ ಹೆಬ್ಬೆಟ್ಟಿನ ಗುರುತುಗಳನ್ನು ಗುರುತಿಸಿರುತ್ತಾರೆ. ದಾವೆಯನ್ನು ಡಿಕ್ರಿ ಮಾಡುವಂತೆ ಕೋರುತ್ತೇನೆ.

ಪಾಟೀ ಸವಾಲುಃ-

ಪ್ರತಿವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.